ದಿನಾಂಕ : 24-07-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಸ್.ಎನ್.ಪಿ ವಕೀಲರಿಂದ.**

3. ನಾನು 10 ನೇ ತರಗತಿ ವರೆಗೆ ವಿಧ್ಯಾಬ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ದೇವದಾಸ ಶೇರಖಾನೆ ಎನ್ನುವವರು ನನ್ನ ಅಣ್ಣ. ಅವರು ವಕೀಲರಾಗಿದ್ದಾರೆ. ಬಾಬಾಸಾಬ, ಅನೀಲ, ಪ್ರಕಾಶ , ನನ್ನ ಸಹೋದರರು. ಮಂಜುಳಾ ಎನ್ನುವವರು ನನ್ನ ತಾಯಿ. 2008 ರಲ್ಲಿ ನನ್ನ ಮದುವೆಯಾಗಿರುತ್ತದೆ. ನನ್ನನ್ನು ಇಂಚಲಕರಂಜಿ ಉರಿನ ವ್ಯಕ್ತಿಯೊಂದಿಗೆ ನನ್ನ ಮದುವೆಯಾಗಿರುತ್ತದೆ. ನನ್ನ ತವರು ಮನೆ ನನ್ನ ಗಂಡನ ಮನೆಯಿಂದ 50 ಕಿ. ಮಿ. ಇರುತ್ತದೆ. ಘಟನಾ ಸಮಯದಲ್ಲಿ ನನಗೆ ಇಬ್ಬರು ಮಕ್ಕಳಿದ್ದು ಅವರು ಸಣ್ಣವರಿದ್ದರು. ನನ್ನ ಗಂಡ ಪ್ಲಂಬರ ಕೆಲಸ ಮಾಡುತ್ತಾರೆ. ನನ್ನ ಗಂಡನ ಮನೆಯಲ್ಲಿ ಒಟ್ಟು ಕುಟುಂಬದಲ್ಲಿ ವಾಸ ಇದ್ದೇನೆ. ನನ್ನ ಮನೆ ಕೆಲಸವನ್ನು ನಾನು ನಮ್ಮ ಅತ್ತೆ ಒಟ್ಟಿಗೆ ಮಾಡಿಕೊಳ್ಳುತ್ತೇವೆ.

4. ಘಟನೆ ನಡೆಯಿತು ಎನ್ನುವ ಸಮಯಕ್ಕೆ ನನ್ನ 3 ಜನ ಅಣ್ಣ ತಮ್ಮಂದಿರರಿಗೆ ಮದುವೆಯಾಗಿತ್ತು ಅವರೆಲ್ಲರು ಒಟ್ಟಿಗೆ ವಾಸ ಇದ್ದರು. ನನ್ನ ಅಣ್ಣ ತಮ್ಮದಿಂರೆಲ್ಲರು ವಿಧ್ಯಾವಂತರು. ನಾನು ಹುಟ್ಟಿದಾಗಿನಿಂದ ನಾವು ಕಿಡಿಗೇಡಿ ಗ್ರಾಮದಲ್ಲಿ ವಾಸ ಇದ್ದೇವೆ. ನಮಗೆ ಕಿಡಿಗೇಡಿ ಗ್ರಾಮದಲ್ಲಿ ಜಮೀನು ಮತ್ತು ಮನೆ ಇದೆ. ಅದೇ ರೀತಿ ಕಿಡಿಗೇಡಿ ಜಮೀನಿನಲ್ಲಿಯೂ ಸಹ ಮನೆ ಇದೆ. ಎರಡು ಕಡೆಗಳಲ್ಲಿ ನಾವು ವಾಸ ಇರುತ್ತೇವೆ.

5. ನಮಗೆ ಹಿರಿಯರ ಹೆಸರಿನಲ್ಲಿರುವ ಜಮೀನು ಸೇರಿ ಸರ್ವೆ ನಂಬರ 98/3 ರಲ್ಲಿ ಸುಮಾರು 5-6 ಎಕರೆಕ್ಕಿಂತ ಹೆಚ್ಚು ಜಮೀನು ಇರಬಹುದು. ನಮ್ಮ ಹಿರಿಯರು ತೀರಿಕೊಂಡ ನಂತರ ನಮ್ಮ ತಂದೆಯವರಿಗೂ ನಮ್ಮ ಚಿಕ್ಕಪ್ಪನವರಿಗೂ ಭಾಗ ಆಗಿರುವುದಿಲ್ಲ. ನಮ್ಮ ತಾಯಿ, ನಮ್ಮ ಅಣ್ಣ ತಮ್ಮಂದಿರು ಸೇರಿ ಬೇರೆ ಬೇರೆ ವ್ಯಕ್ತಿಗಳ ಮೇಲೆ ಅಟ್ರಾಸಿಟಿ ಕೇಸ ಹಾಕಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಅಷ್ಟು ಪ್ರಕರಣಗಳಲ್ಲಿ ನಾನು ಸಾಕ್ಷಿ ಹೇಳಿದ್ದೇನೆ

ಎನ್ನುವುದು ಸರಿಯಲ್ಲ. ಕೆಂಪವಾಡದಲ್ಲಿ ನನ್ನ ಸಹೋದರ ಮನೆ ಕಟ್ಟಿದ್ದನು ಶೆಡ್ ಕಟ್ಟಿರುವುದಿಲ್ಲ. ಈಗಲೂ ನಾವು ನಮ್ಮ ಹಿರಿಯರ ಜಮೀನಿನಲ್ಲಿ ಇದ್ದೇವೆ. ಅನೀಲ ಅವರು ಯಾವುದಾದರು ಜಮಿನನ್ನು ಖರೀದಿಗೆ ತೆಗೆದುಕೊಂಡಿದ್ದಾರೆ ಎನ್ನುವುದಕ್ಕೆ ಸಾಕ್ಷಿ ಅದು ನಮ್ಮ ಪೂರ್ವಜರ ಜಮೀನು ಎಂದು ಹೇಳಿದ್ದಾರೆ. ಅನೀಲ ಅವರು ಮನೆ ಕಟ್ಟಿರುವ ಸರ್ವೆ ನಂಬರ ನನಗೆ ನೆನಪಿರುವುದಿಲ್ಲ. ನಮ್ಮ ಜಮಿನಿನಲ್ಲಿ 7 ಜನ ಅಣ್ಣ ತಮ್ಮಂದಿರರಿಗೆ ಭಾರ ಇರುತ್ತದೆ. ಅನೀಲನನ್ನು ಹೊರತು ಪಡಿಸಿ ಬೇರೆ ಅಣ್ಣ ತಮ್ಮದಿರು ಮನೆ ಕಟ್ಟಿರುವುದಿಲ್ಲ.

6. ನನ್ನ ಅಣ್ಣ ಅನೀಲ ಮನೆ ಕಟ್ಟಿರುವ ಜಾಗ ಗ್ರಾಮ ಪಂಚಾಯತಿಗೆ ಸೇರಿರುವ ಜಾಗ ಎನ್ನುವುದು ಸರಿಯಲ್ಲ. ಅವರು ನಮ್ಮ ಪೂರ್ವಜರಿಗೆ ಸೇರಿದ ಜಾಗದಲ್ಲಿ ಮನೆ ಕಟ್ಟಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಅಣ್ಣ ಕಟ್ಟಿರುವ ಮನೆಯಿಂದ ಸಾರ್ವಜನಿಕರಗೆ ಓಡಾಲು ತೊಂದರೆಯಾಗುತ್ತದೆ ಎಂದು ಪಂಚಾಯತಿಯವರು ಮನೆಯನ್ನು ತೆರವುಗೊಳಿಸುವಂತೆ ನನ್ನ ಅಣ್ಣನಿಗೆ ಹೇಳಿದ್ದರು ಎನ್ನುವುದು ಸರಿಯಲ್ಲ. ಆ ರೀತಿ ಪಂಚಾಯತಿಯವರು ಹೇಳಿದ್ದರು ಸಹ ನಮ್ಮ ಅದನ್ನು ತೆರವುಗೊಳಿಸಿಲ್ಲ ಎನ್ನುವುದು ಸರಿಯಲ್ಲ. ಈ ಎಲ್ಲಾ ವಿಚಾರ ನನಗೆ ಗೊತ್ತಿದ್ದರು ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

7. ನಾನು ನನ್ನ ಅಣ್ಣ ತಮ್ಮಂದಿರೊಡನೆ ವಿಶ್ವಾಸದಿಂದ ಇದ್ದೇನೆ. ನಾನು ಅವರುಗಳ ಮನೆಗೆ ಹೋಗಿ ಬಂದು ಮಾಡುತ್ತೇನೆ. ಪೊಪಟ ಎನ್ನುವವರು ನನ್ನ ತಮ್ಮ ಮತ್ತು ಅಶೋಕ ಎನ್ನುವವರು ನನ್ನ ಅಣ್ಣ. ದೂರನ್ನು ತಯಾರಿಸಲು ನನ್ನ ಅಣ್ಣ ದೇವದಾಸ ಮಾಹಿತಿ ಕೊಟ್ಟಿದ್ದಾರೆ ಎನ್ನುವುದಕ್ಕೆ ಅದು ತಮಗೆ ಗೊತ್ತಿಲ್ಲ ಎಂದು ನಾನು ಜಗಳ ನೋಡಿ ಬಿಡಿಸಿದ್ದೇನೆಂದು ಅಷ್ಟನ್ನು ಮಾತ್ರ ಹೇಳುತ್ತೇನೆ ಎಂದು ಹೇಳಿದ್ದಾರೆ. ನಾನು ಹೇಳಿದಂತೆ ಯಾವುದೆ ಘಟನೆ ಆಗಿಲ್ಲ ಎನ್ನುವುದು ಸರಿಯಲ್ಲ.

8. ಘಟನೆ ನಡೆದ ಅಕ್ಕಪಕ್ಕದಲ್ಲಿ ಮನೆಗಳು ಇರುವುದಿಲ್ಲ ಸ್ವಲ್ಪ ದೂರದಲ್ಲಿ ಇವೆ. ನಮ್ಮ ಮನೆಯ ಮುಂದೆ ಜನರು ಓಡಾಡುತ್ತಾರೆ ಎನ್ನುವುದು ಸರಿಯಲ್ಲ. ನಮ್ಮ ಜಮಿನೀನ ಅಕ್ಕಪಕ್ಕದಲ್ಲಿ ಬೇರೆ ಬೇರೆ ಜಮಿನುಗಳು ಇವೆ ಮತ್ತು ಆಯಾ ಜಮೀನಿನವರು ಓಡಾಡುತ್ತಿರುತ್ತಾರೆ. ಆರೋಪಿತರು ಯಾರು ನಮ್ಮ ಮನೆ ಹತ್ತಿರ ಬಂದಿರುವುದಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ್ದಂತೆ ಯಾವುದೆ ಘಟನೆ ಆಗಿರುವುದಿಲ್ಲ ಎನ್ನುವುದು ಸರಿಯಲ್ಲ. ಆರೋಪಿತರು ನಮಗೆ ಜಾತಿ ಹೆಸರು ಹಿಡಿದು ಬೈದಿರುವುದಿಲ್ಲ ಅವಮಾನ ಮಾಡಿರುವುದಿಲ್ಲ ಎನ್ನುವುದು ಸರಿಯಲ್ಲ. ನಾನು, ನಮ್ಮ ತಾಯಿ, ನಮ್ಮ ಅಣ್ಣತಮ್ಮಂದಿರು ಸೇರಿ ಆರೋಪಿತರ ವಿರುದ್ಧ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಬೆಳಗಾವಿ.